ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ -581 334

**OFFICE OF THE DEPUTY CONSERVATOR OF FORESTS, HONAVAR DIVISION, HONAVAR-581334**

ದೂರವಾಣಿ: 08387-220235 ಫ್ಯಾಕ್ಸ ನಂ. 08387-221170

ನಂ. ಎ2/ಬಜೆಟ್/ಟೆಂಡರ್/ವಿವ-2/2019-20 ಹೊನ್ನಾವರ ದಿನಾಂಕ: 15.07.2019

## 2019-20 ನೇ ಸಾಲಿಗೆ ಹೊನ್ನಾವರ ವಿಭಾಗದಲ್ಲಿ ಇಲಾಖಾ ವಸತಿ ಗೃಹಗಳ ಮತ್ತು ಕಟ್ಟಡಗಳ ದುರಸ್ತಿ ಕಾಮಗಾರಿಗಳ ಮರು ಟೆಂಡರು ಪ್ರಕಟಣೆ

ಸಾರ್ವಜನಿಕರ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸುವುದೇನೆಂದರೆ, ಈ ಮುಂದೆ ಕಾಣಿಸಲಾದ ದಿನಾಂಕ ಮತ್ತು ವೇಳೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹೊನ್ನಾವರ ವಿಭಾಗ, ಹೊನ್ನಾವರ ಇವರ ಕಛೇರಿಯಲ್ಲಿ ಇಲಾಖಾ ವಸತಿ ಗೃಹಗಳ ಮತ್ತು ಕಟ್ಟಡಗಳ ದುರಸ್ತಿ ಕಾಮಗಾರಿಗಳ ಮರು ಬಗ್ಗೆ ಟೆಂಡರು ನಡೆಸಲಿದ್ದಾರೆ. ಆಸಕ್ತ ನೋಂದಾಯಿತ ಗುತ್ತಿಗೆದಾರರು ಟೆಂಡರನಲ್ಲಿ ಭಾಗವಹಿಸಬಹುದಾಗಿದೆ.

| | |
|---|---|
| 1. ಟೆಂಡರು ಸ್ಥಳ | ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ |
| 2. ಟೆಂಡರು ಸ್ವೀಕರಿಸುವ ದಿನಾಂಕ ಮತ್ತು ವೇಳೆ | ಟೆಂಡರ ದಿನಾಂಕ: 23.07.2019 ರಂದು ಮುಂಜಾನೆ 10.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆವರೆಗೆ (ಈ ಕಛೇರಿಯ ಗಡಿಯಾರದಂತೆ). 3.00 ಗಂಟೆಯ ನಂತರ ಟೆಂಡರನ್ನು ಟೆಂಡರುದಾರರ ಸಮಕ್ಷಮದಲ್ಲಿ ಒಡೆಯಲಾಗುವುದು. |
| 3. ಟೆಂಡರು ಸ್ವೀಕರಿಸುವ ಅಧಿಕಾರಿಗಳು | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹೊನ್ನಾವರ ವಿಭಾಗ, ಹೊನ್ನಾವರ ಇಲ್ಲವೇ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು |
| 4. ಮರುಟೆಂಡರ ದಿನಾಂಕ | - |
| 5. ಟೆಂಡರ ವಿವರ | ಅನುಬಂಧ-1 ರಲ್ಲಿ ನಮುದಿಸಿದಂತೆ. |

ಈ ಟೆಂಡರ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ವಿವರವಾದ ಟೆಂಡರ ಪ್ರಕಟಣೆಯನ್ನು ಕಛೇರಿ ವೇಳೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ ಇವರ ಕಛೇರಿಯಿಂದ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 08387-220235 ಮೂಲಕ ಪಡೆಯಬಹುದು.

ಟೆಂಡರುದಾರರು ಈ ಕೆಳಗಿನ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು

1. ಟೆಂಡರಿನಲ್ಲಿ ಭಾಗವಹಿಸಲಿಚ್ಚಿಸುವವರು ತಮ್ಮ ಹೆಸರನ್ನು 2019-20 ನೇ ಸಾಲಿಗೆ ಈ ವಿಭಾಗದಲ್ಲಿ ಕಡ್ಡಾಯವಾಗಿ ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿಸಿಕೊಂಡಿರತಕ್ಕದ್ದು.
2. ಗುತ್ತಿಗೆದಾರರು ಸದರ ಟೆಂಡರಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೃಢೀಕೃತ ದಾಖಲಾತಿಗಳನ್ನು ಅರ್ಜಿಗೆ ಲಗತ್ತಿಸಬೇಕು. ಅವುಗಳನ್ನು ಪರಿಶೀಲಿಸಿದ ನಂತರ ಟೆಂಡರ ಫಾರ್ಮನ್ನು ಕೊಡಲಾಗುವುದು. ಒಂದಾನುವೇಳೆ ಅಪೂರ್ಣ ಮಾಹಿತಿ/ಕೆಳಕಂಡ ದಾಖಲಾತಿಗಳನ್ನು ಪೂರೈಸದೇ ಇದ್ದಲ್ಲಿ ಅಂತಹ ಅರ್ಜಿಯನ್ನು ಯಾವುದೇ ಮುನ್ಸೂಚನೆ ನೀಡದೇ ತಿರಸ್ಕರಿಸಲಾಗುವುದು.

   1) 2019-20 ನೇ ಸಾಲಿಗೆ ಈ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರೆಂದು ನೋಂದಾಯಿಸಿದ ಪ್ರಮಾಣ ಪತ್ರ
   2) ಚಾಲ್ತಿಯಲ್ಲಿರುವ ಆದಾಯಕರ ಮತ್ತು ಮಾರಾಟಕರದ ತೀರಿಕೆ ಪ್ರಮಾಣ ಪತ್ರ
   3) ಗುತ್ತಿಗೆದಾರರು ಹಿಂದಿನ 3 ವರ್ಷಗಳಲ್ಲಿ ಕಟ್ಟಡ ದುರಸ್ತಿ ಕಾಮಗಾರಿ ಕೈಗೊಂಡಿದ್ದರ ಅನುಭವ ಹೊಂದಿರತಕ್ಕದ್ದು ಮತ್ತು ದೃಢೀಕೃತ ಪ್ರತಿಯನ್ನು ಟೆಂಡರ ಜೊತೆಗೆ ಲಗ್ತಿಸತಕ್ಕದು.
3. ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಮುಗಿಸಿಕೊಡತಕ್ಕದ್ದು. ಇವುಗಳಿಗೆ ಯಾವುದೇ ಹೆಚ್ಚುವರಿ ಮುದ್ದತ್ತು ಕೊಡಲಾಗುವುದಿಲ್ಲ. ಒಂದಾನುವೇಳೆ ಗುತ್ತಿಗೆದಾರರ ಲೋಪದಿಂದ ಕೆಲಸ ಕಾರ್ಯದಲ್ಲಿ ವಿಳಂಬವಾದಲ್ಲಿ ಮತ್ತು ಭಾಗಶ: ಕೆಲಸ ಕೈಗೊಂಡಲ್ಲಿ ಇಲ್ಲವೇ ಕಳಪೆ ಕಾಮಗಾರಿ ಮಾಡಿದ್ದಲ್ಲಿ ಅದನ್ನು

ಗುತ್ತಿಗೆದಾರರ ಸ್ವಂತ ಜವಾಬ್ದಾರಿಯ ಮೇರೆಗೆ ಕೈಗೊಂಡು ಸರ್ಕಾರಕ್ಕೆ ಉಂಟಾದ ನಷ್ಟವನ್ನು ಗುತ್ತಿಗೆದಾರರಿಂದಲೇ ಭರಿಸುವ ಶರ್ತಗೆ ಬದ್ಧರಾಗಿರುವುದು ಮತ್ತು ಅಂಥಹ ಗುತ್ತಿಗೆದಾರರ ಹೆಸರನ್ನು ಕಪ್ಪುಪಟ್ಟಿಗೆ ಒಳಪಡಿಸಲು ಕ್ರಮ ಕೈಗೊಳ್ಳಲಾಗುವುದು.

4. ಟೆಂಡರುದಾರರು ಟೆಂಡರ ಫಾರ್ಮಿಗಾಗಿ ಅರ್ಜಿಯನ್ನು ಸಲ್ಲಿಸುವಾಗ ಎಲ್ಲಾ ಮೂಲ ದಾಖಲಾತಿಗಳನ್ನು ಈ ಕಛೇರಿಯಲ್ಲಿ ಪರಿಶೀಲನೆಗಾಗಿ ಇಡತಕ್ಕದ್ದು.
5. ಟೆಂಡರ ಫಾರ್ಮುಗಳನ್ನು ಪ್ರತಿ ಯುನಿಟಗೆ ಹಣ ಪಾವತಿಯಿಂದ ನೀಡಲಾಗುವುದು. ಮತ್ತು ಇಎಂಡಿ ಮೊತ್ತವನ್ನು ಡಿಮಾಂಡ ಡ್ರಾಫ್ಟ ಮೂಲಕ ರಾಷ್ಟ್ರೀಕೃತ ಮನ್ನಣೆ ಪಡೆದ ಬ್ಯಾಂಕಿನಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ ಇವರ ಹೆಸರಿನಲ್ಲಿ ಕೊಡತಕ್ಕದ್ದು.
6. ಟೆಂಡರ ಫಾರ್ಮುಗಳನ್ನು ಟೆಂಡರಿನ ದಿನದಂದು ಮಧ್ಯಾಹ್ನ 12.30 ಗಂಟೆಯವರೆಗೆ ಮಾತ್ರ ನೀಡಲಾಗುವುದು.
7. ಯುನಿಟ್ಟುಗಳನ್ನು ಹೆಚ್ಚಿಗೆ ಅಥವಾ ಕಡಿಮೆ ಮಾಡುವ ಪೂರ್ತಿ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಹೊಂದಿರುವರು. ಅಲ್ಲದೇ ಸ್ಥಳ ಬದಲಾವಣೆಯ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಹೊಂದಿರುವರು ಮತ್ತು ಯಶಸ್ವೀ ಟೆಂಡರುದಾರರಿಗೆ ಕಾಮಗಾರಿಗಳಿಗಾಗಿ ಸೂಚಿಸಲಾದ ಸ್ಥಳಗಳನ್ನು ಆಯಾ ವಲಯದ ವಲಯ ಅರಣ್ಯಾಧಿಕಾರಿಗಳಿಂದ ಪ್ರತ್ಯೇಕವಾಗಿ ತಿಳಿಸಲಾಗುವುದು.
8. ಒಂದು ವೇಳೆ ಮೇಲೆ ತಿಳಿಸಿದ ದಿನಾಂಕಗಳು ರಜಾದಿನಗಳಾಗಿದ್ದಲ್ಲಿ ಮುಂದಿನ ಕೆಲಸದ ದಿನವನ್ನು ಗಣನೆಗೆ ತೆಗೆದುಕೊಳ್ಳುವುದು.
9. ಪ್ರತಿಯೊಂದು ಯುನಿಟ್ಟಿಗೂ ಪ್ರತ್ಯೇಕ ಫಾರ್ಮನ್ನು ಪಡೆದುಕೊಳ್ಳತಕ್ಕದ್ದು.
10. ಟೆಂಡರ ಫಾರ್ಮಿನ ಮೊತ್ತ ರೂ. 500/- ಪ್ರತಿ ಒಂದಕ್ಕೆ. ತೆರಿಗೆಗಳು ಪ್ರತ್ಯೇಕ.
11. ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ಕೊಡದೇ ಮಂಜೂರು ಮಾಡುವ ಅಥವಾ ನಿರಾಕರಿಸುವ ಹಾಗೂ ಮರು ಟೆಂಡರ ಕೈಗೊಳ್ಳುವ ಅಧಿಕಾರವನ್ನು ಅಧಿಕಾರಸ್ಥ ಅಧಿಕಾರಿಯು ಕಾಯ್ದಿರಿಸಿರುತ್ತಾರೆ.
12. ಈ ಕಾಮಗಾರಿಗಳು ಋತುಮಾನಕ್ಕೆ ತಕ್ಕಂತೆ ಕೈಗೊಳ್ಳಬೇಕಾಗಿರುವುದರಿಂದ ಯಶಸ್ವೀ ಟೆಂಡರುದಾರರು ಟೆಂಡರು ಮಂಜೂರಾತಿ ನಂತರ ಮುಂದಿನ ಕೆಲಸಗಳನ್ನು ಕೈಗೊಳ್ಳುವ ಶರತ್ತಿಗೆ ಬದ್ಧರಾಗಿರತಕ್ಕದ್ದು.
13. ಪ್ರತಿ ಯುನಿಟ್ಟಿಗೆ ತೋರಿಸಿದ ಮೊತ್ತವು ಅಂದಾಜಿನದಾಗಿದ್ದು ಲಭ್ಯವಾಗುವ ಅನುದಾನ, ಮಂಜೂರಾಗುವ ಅಂದಾಜು ಪ್ರತಿಯ ಮೊತ್ತಕ್ಕೆ ಸೀಮಿತವಾಗಿರುತ್ತದೆ. ಒಂದು ವೇಳೆ ಅನುದಾನ ಪ್ರಾಪ್ತವಾಗದಿದ್ದಲ್ಲಿ ಟೆಂಡರನ್ನು ಅಥವಾ ಕಾಮಗಾರಿಯನ್ನು ಯಾವುದೇ ಅವಧಿಯಲ್ಲಿ ರದ್ದುಪಡಿಸಬಹುದಾಗಿರುತ್ತದೆ ಮತ್ತು ವಲಯವಾರು ಕಾಮಗಾರಿಗಾಗಿ ನಮೂದಿಸಿದ ಯುನಿಟ್ಟುಗಳ ಕೆಲಸಗಳು ಬೇರೆ ವಲಯಗಳಿಗೆ ವರ್ಗಾಯಿಸುವ ಪ್ರಮೇಯ ಬಂದಾಗ ಅದಕ್ಕನುಗುಣವಾಗಿ ಗುತ್ತಿಗೆದಾರರು ಕೆಲಸ ನಿರ್ವಹಿಸಲು ಬದ್ಧರಾಗಿರತಕ್ಕದ್ದು.
14. ಗುತ್ತಿಗೆ ಕೆಲಸಕ್ಕೆ ಯಾವುದೇ ಮುಂಗಡ ಹಣ ಪಾವತಿಸಲಾಗುತ್ತಿಲ್ಲ. ಮತ್ತು ಸಾಮಗ್ರಿಗಳನ್ನು ಪೂರೈಸಲಾಗುತ್ತಿಲ್ಲ. ಕೈಗೊಂಡ ಕೆಲಸ ಸಮರ್ಪಕವಾಗಿರುವ ಬಗ್ಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಗಳ ಕ್ಷೇತ್ರ ತಪಾಸಣೆ ಎಫ್‌ಎನ್‌ಬಿ/ಎಂಬಿ ಮೆಜರಮೆಂಟ ಪ್ರಕಾರ ಹಣ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.
15. ಟೆಂಡರುದಾರು ಇಎಂಡಿ ಹಣವನ್ನು ಟೆಂಡರ ಕಾಲಕ್ಕೆ ಅನುಬಂಧ-1 ರಲ್ಲಿ ಸೂಚಿಸಿದ ಹಣವನ್ನು ಪ್ರತಿ ಯುನಿಟ್ಟಿಗೆ ಪ್ರತ್ಯೇಕವಾಗಿ ಡಿಮಾಂಡ ಡ್ರಾಫ್ಟ ಮೂಲಕ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ಇವರ ಹೆಸರಿಗೆ ನೀಡುವುದು. ಹಾಗೆಯೇ ಯಶಸ್ವಿ ಟೆಂಡರುದಾರರು ಭದ್ರತಾ ಠೇವಣಿ ಹಣವನ್ನು ಸಹ ಕರಾರು ಒಪ್ಪಂದದ ವೇಳೆಯಲ್ಲಿ ನೀಡುವುದು.
16. ಹೆಚ್ಚಿನ ವಿವರಗಳಿಗೆ ವಿಭಾಗ ಕಛೇರಿಯಲ್ಲಿ ಕಛೇರಿಯ ಅವಧಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

(ಗಣಪತಿ ಕೆ., ಭಾ.ಅ.ಸೇ)
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹೊನ್ನಾವರ ವಿಭಾಗ, ಹೊನ್ನಾವರ